# ಸುದ್ದಿ ಸಂಚಯ

## ಚೆನ್ನೈನಲ್ಲಿ ಸ್ವಾಮಿ ವಿವೇಕಾನಂದರ ಚಿತ್ರಗಳ ಪ್ರದರ್ಶನ



ಚಿತ್ರಗಳನ್ನು ವೀಕ್ಷಿಸುತ್ತಿರುವ ಸ್ವಾಮಿ ಗೌತಮಾನಂದಜಿ ಮತ್ತು 'ರಾಮಕೃಷ್ಣ ವಿಜಯಂ' ಪತ್ರಿಕೆಯ ಸಂಪಾದಕರಾದ ಸ್ವಾಮಿ ವಿಮೂರ್ತಾನಂದಜಿ

**ಚೆ**ನ್ನೈ ರಾಮಕೃಷ್ಣ ಮಠವು 'ಶ್ರೀರಾಮಕೃಷ್ಣ ವಿಜಯಂ' ಎಂಬ ಮಾಸಪತ್ರಿಕೆಯನ್ನು ಹೊರತರುತ್ತಿದೆ. ಕಳೆದ ಆರು ವರ್ಷಗಳಿಂದ ಶಾಲಾಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ರಸಪ್ರಶ್ನೆ ಕಾರ್ಯಕ್ರಮವನ್ನು ಪತ್ರಿಕೆಯ ವತಿಯಿಂದ ನಡೆಸಲಾಗುತ್ತಿತ್ತು. ಈ ವರ್ಷ ಸ್ವಾಮಿ ವಿವೇಕಾನಂದರ ಚಿತ್ರ ಬರೆಯುವ ಸ್ಪರ್ಧೆಯನ್ನು ಏರ್ಪಡಿಸಲಾಯಿತು. ಅದಕ್ಕೆ ಅತ್ಯುತ್ತಮ ಪ್ರತಿಕ್ರಿಯೆ ಬಂದಿದ್ದು, ೨೦,೩೦೦ ಜನ ಇದರಲ್ಲಿ ಭಾಗವಹಿಸಿದ್ದರು. ಇದರಲ್ಲಿ ವಿಜೇತರಾದವರಿಗೆ ಜನವರಿ ೧೨ ನೆಯ ತಾರೀಖು ಬಹುಮಾನಗಳನ್ನು ವಿತರಿಸಲಾಯಿತು.

ಸ್ವಾಮಿ ವಿವೇಕಾನಂದರ ಜೀವನದ ಘಟನೆಗಳನ್ನು ಬಿಂಬಿಸುವ ವೈವಿಧ್ಯಮಯ ಚಿತ್ರಗಳನ್ನು ವಿದ್ಯಾರ್ಥಿಗಳು ರಚಿಸಿದ್ದರು. ತಮಿಳುನಾಡು ರಾಜ್ಯದಿಂದ ಅಲ್ಲದೆ, ಕೇರಳ ನಾಗಾಲ್ಯಾಂಡ್, ಶ್ರೀಲಂಕಾ ಮುಂತಾದ ಕಡೆಗಳ ಯುವ ಜನರು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದುದು ವಿಶೇಷ. ಒಬ್ಬ ಯುವಕನು ತನ್ನ ದೇಹದ ರಕ್ತದಲ್ಲಿಯೇ ಚಿತ್ರವನ್ನು ರಚಿಸಿದ್ದಾನೆ. ಒಬ್ಬ ಅಂಗವಿಕಲನು ಒಂದು ಬ್ರಶ್ ಅನ್ನು ಕಾಲಿನ ಬೆರಳುಗಳಲ್ಲಿ ಮತ್ತು ಇನ್ನೊಂದನ್ನು ಬಾಯಿಯಲ್ಲಿ ಹಿಡಿದು ಚಿತ್ರವನ್ನು ರಚಿಸಿ ಕಳುಹಿಸಿದ್ದಾನೆ.

ಸ್ಪರ್ಧೆಗಾಗಿ ಸ್ವೀಕರಿಸಿದ ೩೦೦ ಉತ್ತಮ ಕಲಾ ಚಿತ್ರಗಳ ಪ್ರದರ್ಶನವನ್ನು ವಿವೇಕಾನಂದ ಇಲ್ಲಮ್ (ಸ್ವಾಮಿ ವಿವೇಕಾನಂದರು ವಾಸವಾಗಿದ್ದ ಸ್ಥಳ) ದಲ್ಲಿ ಜನವರಿ ೧೨ ರಿಂದ ೨೬ ರವರೆಗೆ ಏರ್ಪಡಿಸಲಾಗಿತ್ತು. ಈ ಪ್ರದರ್ಶನವನ್ನು ಚೆನ್ನೈ ಶ್ರೀರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಗೌತಮಾನಂದಜಿ ಅವರು ಉದ್ಘಾಟಿಸಿದರು.

ಈ ಪ್ರದರ್ಶನಕ್ಕೆ ಉತ್ತಮ ಪ್ರತಿಕ್ರಿಯೆ ಬಂದಿದ್ದು, ಅನೇಕ ವಿದೇಶೀಯರು ಕೂಡ ಇದಕ್ಕೆ ಭೇಟಿಕೊಟ್ಟಿದ್ದಾರೆ. ಸುಮಾರು ೧೧,೦೦೦ ಜನ ಇದನ್ನು ಸಂದರ್ಶಿಸಿದ್ದಾರೆ. ಮಾಧ್ಯಮಗಳು ಕೂಡ ಈ ಚಿತ್ರಪ್ರದರ್ಶನದ ವರದಿಯನ್ನು ಪ್ರಕಟಿಸಿವೆ.

ಈ ಚಿತ್ರ ಪ್ರದರ್ಶನವನ್ನು ತಿರಪ್ಪೂರ್, ನೈವೇಲಿ, ವಿಲ್ಲಿಪುರಂ, ಚೆಂಗಲ್‌ಪೇಟ್ ಮುಂತಾದ ಊರುಗಳಲ್ಲಿ ಆಯೋಜಿಸಲು ನಿರ್ಧರಿಸಲಾಗಿದೆ.

## ಬೆಳಗಾವಿ ರಾಮಕೃಷ್ಣ ಮಿಷನ್ನಿನ ವಾರ್ಷಿಕೋತ್ಸವ

**ಬೆ**ಳಗಾವಿ ರಾಮಕೃಷ್ಣ ಮಿಷನ್ ಆಶ್ರಮದ ವಾರ್ಷಿಕೋತ್ಸವವು ಇತ್ತೀಚಿಗೆ ಎರಡು ದಿನಗಳ ಕಾಲ ನಡೆಯಿತು. ದಿನಾಂಕ ೩೧.೦೧.೨೦೦೯ ರಂದು ವಿದ್ಯಾರ್ಥಿ ಸಮಾವೇಶವನ್ನು ಏರ್ಪಡಿಸಲಾಗಿತ್ತು. ಕನ್ನಡ ಮತ್ತು ಮರಾಠಿ ಭಾಷೆಗಳಲ್ಲಿ ನಡೆದ ಸಮಾವೇಶಗಳಲ್ಲಿ ಬೆಳಗಾವಿ ನಗರದ ೧೮೦೦ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಅಂದು ಸಂಜೆ ಶ್ರೀ ಜಯತೀರ್ಥ ಮೆವುಂಡಿ ಮತ್ತಿತರ ಕಲಾವಿದರು ಭಜನೆ ಮತ್ತು ಮರಾಠಿ ಅಭಂಗಗಳನ್ನು ಹಾಡಿದರು. ದಿನಾಂಕ ೦೧.೦೨.೨೦೦೯ ರಂದು ಭಕ್ತ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು. ಸ್ವಾಮಿ ತ್ರಿದಿವೇಶಾನಂದಜಿ ಅವರು ಈ ಸಮ್ಮೇಳನವನ್ನು ಉದ್ಘಾಟಿಸಿದರು. ಸ್ವಾಮಿ ನಿತ್ಯಸ್ಥಾನಂದಜಿ, ಶ್ರೀ ಮುರುಗೇಂದ್ರ ಸ್ವಾಮೀಜಿ, ಶ್ರೀ ಕುಮಾರ ವಿರೂಪಾಕ್ಷ ಸ್ವಾಮೀಜಿ ಮತ್ತು ಡಾ. ಹೆಚ್. ಎನ್. ಮುರಳೀಧರ ಭಕ್ತರನ್ನು ಉದ್ದೇಶಿಸಿ ಭಾಷಣಗಳನ್ನು ಮಾಡಿದರು.



ಸುಮಾರು ೧೦೦೦ ಭಕ್ತರು ಇದರಲ್ಲಿ ಭಾಗವಹಿಸಿದ್ದರು. ಸಂಜೆ ಶ್ರೀ ರವೀಂದ್ರ ಸಾಠೆ ಮತ್ತು ಸಂಗಡಿಗರಿಂದ ಭಜನೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

Managing Editor : Swami Nityasthananda Editor : Swami Vireshananda
Printed by Sri J. B. Pattabhi and Published by Swami Nityasthananda, on behalf of Sri Ramakrishna Ashrama, Yadavagiri, Mysore and Printed at Pattabi Enterprises, Ramavilasa Road, Mysore and published at Sri Ramakrishna Ashrama, Yadavagiri, Mysore.